ಶನಿವಾರ,24 ನವೆಂಬರ್ 2018 | ಪುಟಗಳು: 12+4+4(U6) | ಬೆಲೆ: ₹ 5.00
www.vijaykarnataka.com
ಸಂಪುಟ: 18 | ಸಂಚಿಕೆ: 118
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ



ಇಂಗ್ಲೆಂಡ್ ವಿರುದ್ಧ ಸೋಲು: ಭಾರತದ ಮಹಿಳಾ ಟಿ20 ವಿಶ್ವಕಪ್ ಪಯಣಕ್ಕೆ ತೆರೆ P11



2019ರ ಫೆಬ್ರವರಿಯಲ್ಲಿ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರಿಂದ ಮಧ್ಯಾಂತರ ಬಜೆಟ್ ಮಂಡನೆ P09

ಟಿ.ವಿ ಜಾಹೀರಾತು: ಎಲ್ಲ ಕಂಪನಿಗಳನ್ನು ಮೀರಿ ನಂಬರ್ ಒನ್ ಆಯ್ತು ಬಿಜೆಪಿ! P10

# ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ 'ಅಟಲ್ ರ‍್ಯಾಂಕಿಂಗ್ ಶ್ರೇಣಿ'

**ಬೆಂಗಳೂರು:** ದೇಶದ ತಾಂತ್ರಿಕ ವಿಶ್ವವಿದ್ಯಾಲಯಗಳು ಅಥವಾ ಶಿಕ್ಷಣ ಸಂಸ್ಥೆಗಳಿಗೆ ಸಂಶೋಧನೆಯನ್ನು ಪ್ರಮುಖ ಮಾನದಂಡವಾಗಿ ಪರಿಗಣಿಸಿ 'ಅಟಲ್ ರ‍್ಯಾಂಕಿಂಗ್' ಶ್ರೇಣಿ ನೀಡಲು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ ನಿರ್ಧರಿಸಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ(ವಿಟಿಯು) ಹಾಗೂ ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ (ಎಐಸಿಟಿಇ) ನಗರದಲ್ಲಿ ಆಯೋಜಿಸಿ ರುವ ತಾಂತ್ರಿಕ ವಿಶ್ವವಿದ್ಯಾಲಯ ಕುಲಪತಿಗಳ ಸಮ್ಮೇಳನದಲ್ಲಿ ಎಐಸಿಟಿಇ ಮುಖ್ಯಸ್ಥ ಪ್ರೊ.ಅನಿಲ್ ಸಹಸ್ರಬುದ್ಧೆ ಈ ನಿರ್ಧಾರ ಪ್ರಕಟಿಸಿದರು.

''ಪ್ರತಿ ತಾಂತ್ರಿಕ ವಿವಿ ಹಾಗೂ ಕಾಲೇಜುಗಳಲ್ಲಿ ಇನ್ನೊವೇಷನ್ ಸೆಲ್ ಆರಂಭಿಸುವುದು ಕಡ್ಡಾಯ. ಈ ಹಿನ್ನೆಲೆ ಯಲ್ಲಿ ನಾವು 'ಅಟಲ್ ರ‍್ಯಾಂಕಿಂಗ್' ಶ್ರೇಣಿ ವ್ಯವಸ್ಥೆಯನ್ನು ಜಾರಿಗೆ ತರಲು ನಿರ್ಧರಿಸಿದ್ದೇವೆ. ಆವಿಷ್ಕಾರ ಆಧರಿಸಿ ವಿವಿ ಹಾಗೂ ಕಾಲೇಜುಗಳನ್ನು ರ‍್ಯಾಂಕಿಂಗ್‌ಗೆ ಪರಿಗಣಿಸಲಾಗು ವುದು'' ಎಂದು ಅವರು ತಿಳಿಸಿದರು.

ವಿಟಿಯು ಕುಲಪತಿ ಡಾ.ಕರಿಸಿದ್ದಪ್ಪ ಮಾತನಾಡಿ, ''ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಡಿಜಿಟಲ್ ಗ್ರಂಥಾಲಯ ಆರಂಭಿಸಿದೆ. ಇದರಿಂದ ಎಲ್ಲ ಪಠ್ಯಪುಸ್ತಕಗಳು ಕೂಡ ಆನ್‌ಲೈನ್ ನಲ್ಲೇ ವಿದ್ಯಾರ್ಥಿಗಳಿಗೆ ಲಭ್ಯವಾಗಲಿವೆ'' ಎಂದರು.

''ಮುಕ್ತ ಪುಸ್ತಕ ಪರೀಕ್ಷೆ ಎಲ್ಲ ಕೋರ್ಸ್‌ಗೂ ಅನ್ವಯವಾಗುವುದಿಲ್ಲ, ಹೀಗಾಗಿ, ಎಐಸಿಟಿಇ ಮಾರ್ಗಸೂಚಿ ಅಧ್ಯಯನ ಮಾಡಿದ ನಂತರವಷ್ಟೇ ಅನುಷ್ಠಾನ ಮಾಡಲು ಸಾಧ್ಯ. ಹೀಗಾಗಿ, ಮುಕ್ತ ಪುಸ್ತಕ ಪರೀಕ್ಷೆ ಅನುಷ್ಠಾನಗೊಳಿಸಲು ಕನಿಷ್ಠ 4 ವರ್ಷ ಬೇಕಾಗುತ್ತದೆ,''ಎಂದು ಅವರು ಪ್ರತಿಪಾದಿಸಿದರು.




Royce uPVC Doors & Windows
Showroom: Hotel Karthik Estate Complex, Ambalpady Junction, NH 66, UDUPI - 576103, Karnataka.
Call Us: 8884-2222-70 | www.roycewindows.com

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ

CENTRAL LIBRARY




Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಶನಿವಾರ, ನವೆಂಬರ್ 24, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 16+4 (UDP 6

# ತಾಂತ್ರಿಕ ಕೋರ್ಸ್: ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಸಿಗಲಿ

## ರಾಜ್ಯಪಾಲ ವಿ.ಆರ್. ವಾಲಾ

ಬೆಂಗಳೂರು, ನ. 23 : ದೇಶದ ಸಮಗ್ರ ಅಭಿವೃದ್ಧಿ ಮತ್ತು ಆರ್ಥಿಕ ಸುಸ್ಥಿರತೆಯ ದೃಷ್ಟಿಯಿಂದ ತಾಂತ್ರಿಕ ಕೋರ್ಸ್‌ಗಳಿಗೆ ಸೇರುವ ವಿದ್ಯಾರ್ಥಿಗಳಿಗೆ ಸರಕಾರ ಉಚಿತ ಶಿಕ್ಷಣ ನೀಡುವಂತಾಗಬೇಕು ಎಂದು ರಾಜ್ಯಪಾಲ ವಿ.ಆರ್.ವಾಲಾ ಪ್ರತಿಪಾದಿಸಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮತ್ತು ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ ನಗರದ ಖಾಸಗಿ ಹೋಟೇಲ್‌ನಲ್ಲಿ ಹಮ್ಮಿಕೊಂಡಿರುವ 2 ದಿನಗಳ ತಾಂತ್ರಿಕ ವಿಶ್ವವಿದ್ಯಾಯಲಗಳ ಕುಲಪತಿಗಳ ಸಮ್ಮೇಳನಕ್ಕೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.

ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾಂಶುಪಾಲರ ಜವಾಬ್ದಾರಿ ಅತಿ ದೊಡ್ಡದಿದೆ. ತಾಂತ್ರಿಕವಾಗಿ ವಿದ್ಯಾರ್ಥಿಗಳ ಬಲವರ್ಧನೆ ಕಾಲೇಜುಗಳಿಂದಲೇ ನಡೆಯಬೇಕು. ಈ ನಿಟ್ಟಿನಲ್ಲಿ ಪ್ರಾಂಶುಪಾಲರು ಯಾವ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎನ್ನುವುದನ್ನು ತಾಂತ್ರಿಕ ವಿವಿಯ ಕುಲಪತಿಗಳು ಮೇಲುಸ್ತುವಾರಿ ವಹಿಸಬೇಕು. ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿಯಿಂದ ದೇಶ ಬಲಿಷ್ಠವಾಗುವ ಜತೆಗೆ ಆರ್ಥಿಕತೆಯು ಸದೃಢವಾಗುತ್ತದೆ ಎಂದು ಹೇಳಿದರು.

ನಮ್ಮಲ್ಲಿ ಎಲ್ಲ ರೀತಿಯ ಪ್ರತಿಭೆಗಳು ಇವೆ. ಆದರೆ ಅವಕಾಶ ಸಿಗುತ್ತಿಲ್ಲ. ಈ ದೇಶದ ಸಾಮಾನ್ಯ ವ್ಯಕ್ತಿಯೂ ತಂತ್ರಜ್ಞನಿಗಿಂತ ಕಡಿಮೆ ಇಲ್ಲ. ಹೆಲಿಕಾಪ್ಟರ್, ವಿಮಾನ ತಯಾರಿಕೆ ಮತ್ತು ಅಣು ವಿಜ್ಞಾನ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಸಮರ್ಥ್ಯ ಹೊಂದಿದ್ದೇವೆ. ಅದನ್ನು ಸರಿಯಾಗಿ ಬಳಸಿಕೊಂಡು ಸಂಶೋಧನೆಗಳು ಹೆಚ್ಚಾಗಬೇಕು ಎಂದರು.

ಉನ್ನತ ಶಿಕ್ಷಣ ಸಚಿವ ಜಿ.ಟಿ.ದೇವೇಗೌಡ ಮಾತನಾಡಿ, ವಿಜ್ಞಾನ, ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿದೆ. ಅಷ್ಟೇ ವೇಗವಾಗಿ ಪರಿಸರವೂ ನಾಶವಾಗುತ್ತಿದೆ ಮತ್ತು ಜನಸಂಖ್ಯೆಯೂ ಬೆಳೆಯುತ್ತಿದೆ. ಈ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳನ್ನು ಸಮಾಜಮುಖಿಯಾಗಿ ಬೆಳೆಸುವುದೇ ಸವಾಲಾಗಿದೆ ಎಂದರು.

ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳು ಶಿಕ್ಷಣದ ಮೂಲ ಆಶಯ ಈಡೇರಿಸುತ್ತಿದ್ದಾರೆಯೇ ಎಂಬುದನ್ನು ಅವಲೋಕಿಸಬೇಕಿದೆ. ಕುಲಪತಿಗಳು ಅಥವಾ ವಿವಿಯ ಆಡಳಿತ ಮಂಡಳಿಯಲ್ಲಿರುವ ಅಧಿಕಾರಿಗಳು ಶೈಕ್ಷಣಿಕ ಪ್ರಗತಿ ಬಿಟ್ಟು, ಬೇರೆ ಕಡೆ ಗಮನ ಹರಿಸುವುದು ದೇಶಕ್ಕೆ ಮಾಡುತ್ತಿರುವ ದ್ರೋಹ. ಖಾಸಗಿ ಕಾಲೇಜಿನಲ್ಲಿ ಓದಿದ ಶೇ.100ರಷ್ಟು ವಿದ್ಯಾರ್ಥಿಗಳಿಗೆ ಉದ್ಯೋಗ ಸಿಗುತ್ತದೆ. ಆದರೆ ಸರಕಾರಿ ಕಾಲೇಜುಗಳಲ್ಲಿ ಇದು ಏಕೆ ಸಾಧ್ಯವಿಲ್ಲ ಎಂದು ಅಸಮಾಧಾನ ಹೊರ ಹಾಕಿದರು.

DH
DECCAN HERALD
Mangaluru, Saturday November 24, 2018
Pages 24 Vol 21 No 324 ₹ 6.00 M www.deccanherald.com

CENTRAL LIBRARY








Governor Vajubhai Vala inaugurates Tech VCs' Conclave in Bengaluru on Friday. AICTE chief Anil Sahasrabudhe and others look on. DH PHOTO

# VTU to take four years to implement open-book exam

**BENGALURU:** The Vishveshvaraya Technological University (VTU), needs at least four years to implement the open-book exam system, Vice-Chancellor Karisiddappa said on Friday.

After the inauguration of the Tech VCs' Conclave 2018 here, Karisidappa said, "Open-book examination is not a new concept. There are universities and private colleges, which are already following it. AICTE has given its approval for three reforms, we will analyse this and take a call on this. We have to tread with caution in implementing it. It should be implemented in the next revision, after four years. It requires a completely different approach to set the question papers and conduct the examination. We will start working on it now," VC told reporters.

Governor Vajubhai Vala inaugurated the two-day conclave. Higher Education Minister G T Deve Gowda, AICTE Chairman Anil Sahasrabudhe, and NAAC Executive Chairman Virandar S Chauhan among others were present.

In a first for state university, VTU on Friday inaugurated the virtual library.

Students of VTU and its affiliated colleges can get access to the virtual library with the login details provided by the VTU teach the team.

Students can get access to 16,000 books and also have the provision to make notes from them. The varsity is planning to make the virtual library available on phone, through an app.

The library has competitive exam resources, course books, general magazines, leisure reading materials and VTU study materials. Students can log on to vtulib.kopykitab.com.

**DH News Service**